

# ಪೀತ ವರ್ಣದ ಪರ್ಣ ಪ್ರಪಂಚ!

ಕಾಡು ಹಸಿರು ಎಂದವರು ಯಾರು?
ನಾನು ನೋಡಿದ ಕಾಡು..
ಅದು ಬೇರೆಯದ್ದೇ ಲೋಕ!

ಚಿತ್ರ ಲೇಖನ:
**ಸೌಖ್ಯ ಮೋಹನ್**

ವಾಹ್ ರಮ್ಯಾದ್ಭುತ ಲೋಕ! ಕನಸೋ ನನಸೋ ತಿಳಿಯದ ರೋಮಾಂಚನ. ಆಕರ್ಷಕ ಹಳದಿ ಪ್ರಪಂಚ. ಅರಿಶಿನ, ಕೇಸರಿ, ಕೆಂಪು... ಅಭ್ಯಾಗತರನ್ನು ಮೌನವಾಗಿ ಸ್ವಾಗತಿಸುವ ಮನೆಯೊಡೆಯರು. ಮೃದು ಪಲ್ಲಂಗದೋಪಾದಿಯಲ್ಲಿ ಪಾದಗಳಿಗೆ ಸ್ವಲ್ಪವೂ ಮಣ್ಣು ಸ್ಪರ್ಶಿಸದಷ್ಟು ಹಿತವೆನಿಸುವ ಮೆತ್ತನೆಯ ಎಲೆ ಹಾಸು. ಸೂರ್ಯನ ಹೊಂಬೆಳಕಿನೊಡನೆ ಸ್ಪರ್ಧೆ. ನಯನ ಮನೋಹರ ದೃಶ್ಯಕಾವ್ಯ! ಮತ್ಯಾರೂ ಇಲ್ಲದ ಇಲ್ಲಿ ನಮ್ಮನ್ನು ನಾವು ಕಳೆದುಕೊಳ್ಳಲಿಕ್ಕೆ ಪ್ರಶಸ್ತ ಸ್ಥಳ. ಅಲ್ಲಿನ ಚಳಿ ಮೈಮನಗಳನ್ನು ಮುದುಡಿಸಲಿಲ್ಲ. ಅರಳಿಸಿತು!

